ಟೆಂಪೊ ಅಲ್ಲಲ್ಲಿ ನಿಲ್ಲುತ್ತ, ಜನರನ್ನು ಇಳಿಸುತ್ತ, ಹತ್ತಿಸಿಕೊಳ್ಳುತ್ತ ಸಾಗುತ್ತಿತ್ತು. ಮುಂದಿನ ಸೀಟಿನಲ್ಲಿದ್ದ ಜನ ಇಳಿದು ಹೋದರು. ತಕ್ಷಣ ನಾನು ವಿಠೋಬ ಪೈಯವರ ಮಗನ ಪಕ್ಕ ಹೋಗಿ ಕೂತು ಮಾತಿಗೆಳೆದೆ.

"ಪಪ್ಪ ಇಸ್ ನೋ ಮೋರ್. ಐದು ವರ್ಷಗಳ ಹಿಂದೆಯೇ ಹೋಗಿ ಬಿಟ್ಟರು. ಆಯಿ ನನ್ನ ಅಕ್ಕನ ಜತೆ ಮುಂಬಯಿಯಲ್ಲೇ ಇರ್ತಾರೆ. ನಾನು ಐಐಟಿ ಬಾಂಬೆಯಲ್ಲಿ ಎಜುಕೇಷನ್ ಮುಗಿಸಿ ಜರ್ಮನಿಯಲ್ಲಿ ಮೂರು ವರ್ಷ, ಅಮೆರಿಕದಲ್ಲಿ ಎರಡೂವರೆ ವರ್ಷ ಕೆಲಸ ಮಾಡಿದೆ. ಅನಂತರ ಮುಂಬಯಿನಲ್ಲಿ ಒಂದು ವರ್ಷ ಸರ್ವಿಸ್ ಮಾಡಿ ಕಳೆದ ತಿಂಗಳಷ್ಟೇ ಜಾಬ್‌ಗೆ ರಿಸೈನ್ ಮಾಡಿದೆ. ಈಗ ಹುಟ್ಟಿದ ಊರಿನಲ್ಲೇ ಸೆಟ್ಲ್ ಆಗಬೇಕು ಅಂದುಕೊಂಡಿದ್ದೇನೆ" ಎಂದಾತ ಅಹಂನ ಲೇಪವಿಲ್ಲದೆ ವಿನಮ್ರತೆಯಿಂದ ಹೇಳಿದ.

"ಅಮೆರಿಕ, ಜರ್ಮನಿಯಲ್ಲಿ ಇದ್ದವನು ಈ ಸಣ್ಣ ಊರಿಗೆ ಬಂದು ಏನ್ ಮಾಡ್ತಿಯಾ" ಅಂದೆ ನಾನು.



"ಪಪ್ಪ ಯಾವತ್ತೂ ಹೇಳ್ತಾ ಇದ್ರು. ಮಹಾಸಾಗರದಲ್ಲಿ ಒಂದು ಬಿಂದುವಾಗಿ ಐಡೆಂಟಿಟಿಯೇ ಇಲ್ಲದೆ ಉಳಿಯುವುದಕ್ಕಿಂತ, ಮರುಭೂಮಿಯಲ್ಲಿ ಅರ್ಧ ಬೊಗಸೆ ನೀರಾಗಿ ಮಹತ್ವ ಪಡೆಯಬೇಕು ಅಂತ. ಪಪ್ಪ ಯಾವತ್ತೂ ನನಗೆ ಇನ್ ಸ್ಪಿರೇಷನಲ್. ಮಹಾನಗರಗಳಲ್ಲಿನ ಥ್ರಿಲ್‌ಗಳನ್ನು ನಾನೂ ಎಂಜಾಯ್ ಮಾಡಿ ಆಯ್ತು. ಈಗ ರೂರಲ್ ಇಂಡಿಯಾದ ಥ್ರಿಲ್ ಅನುಭವಿಸಬೇಕು ಅಂತ ಅನಿಸ್ತಾ ಇದೆ" ಎಂದ.

"ಏನ್ ಮಾಡ್ತಿಯಾ ಇಲ್ಲಿ" ಎಂದೆ ತುಸು ಆತುರದಿಂದ. "ನ್ಯಾನೊ ಟೆಕ್ನಾಲಜಿಯ ಸ್ಟಾರ್ಟಪ್" ಎಂದಾತ ಕಣ್ಣರಳಿಸಿದ. ನನಗೆ ಅರ್ಥ ಆಗಲಿಲ್ಲ ಎಂಬಂತೆ, "ಇಲ್ಲಿಯ ರೈತರು ರಸಗೊಬ್ಬರ ಬಳಸ್ತಾರಲ್ಲವಾ? ಅಲ್ಲೂ ನ್ಯಾನೊ ಸೈನ್ಸ್ ಯೂಸ್ ಆಗ್ತದೆ. 45 ಕೆಜಿ ಭಾರದ ಒಂದು ಮೂಟೆ ಯೂರಿಯಾ ಬದಲು ಕೇವಲ 500 ಮಿಲಿ ಲೀಟರ್ ದ್ರವ ಸಾಕಾಗ್ತದೆ. ಭಾರವೂ ಕಡಿಮೆ, ಬೆಲೆಯೂ ಚೀಪ್. ಇಲ್ಲಿಯ ಬೆಸ್ತರು ಮೀನು ಹಿಡಿಯಲು ಸಮುದ್ರಕ್ಕಿಳಿಯುತ್ತಾರಲ್ಲವಾ? ಅಲ್ಲೂ ನ್ಯಾನೊ ಹೆಲ್ಪ್ ಮಾಡುತ್ತೆ. ನೀರಾವರಿ, ಶುದ್ಧ ಕುಡಿಯುವ ನೀರು, ಕರೆಂಟು, ಆಹಾರ ಸಂಸ್ಕರಣೆ... ಹೀಗೆ, ಗ್ರಾಮಾಂತರ ಭಾರತದ ದಿಕ್ಕೇ ಬದಲಿಸುವ ಶಕ್ತಿ ಈ ನ್ಯಾನೊಗಿದೆ. ಐ ಹ್ಯಾವ್ ಎ ಬಿಗ್ ಪ್ಲ್ಯಾನ್, ನನಗೀಗ ನಮ್ಮೂರೇ ಹೆಡ್ ಕ್ವಾರ್ಟರ್" ಎಂದ.

ನನ್ನಿಂದ ಮಾತೇ ಹೊರಡಲಿಲ್ಲ. ನನ್ನ ಪ್ರತಿಕ್ರಿಯೆಯ ಪ್ರತೀಕ್ಷೆಯಲ್ಲಿ ಆತ ನನ್ನ ಕಣ್ಣಿಂದ ತನ್ನ ದೃಷ್ಟಿ ಕದಲಿಸಲಿಲ್ಲ. ಟೆಂಪೊ ಶರಾವತಿ ಸೇತುವೆಯ ಮೇಲೆ ಸಾಗುತ್ತಿತ್ತು. "ಕೂ..." ಅಂತ ರೈಲಿನ ಸದ್ದು ಕೇಳಲಾರಂಭಿಸಿತು. ರೈಲು ನೋಡುವ ನೆಪದಲ್ಲಿ ಆತನ ನೋಟದಿಂದ ತಪ್ಪಿಸಿಕೊಂಡು ಕಿಟಕಿಯಾಚೆ ದೃಷ್ಟಿ ಹಾಯಿಸಿದೆ. ಕೊಂಕಣ ರೈಲ್ವೆಯ ನೀಳ ಸೇತುವೆಯ ಮೇಲೆ ಮಡಗಾಂವ್ ಎಕ್ಸ್‌ಪ್ರೆಸ್ ಶರಾವತಿ ನದಿಯನ್ನು ಸೀಳಿಕೊಂಡು ಹೋಗುತ್ತಿರುವಂತೆ ಶರವೇಗದಿಂದ ಸಾಗುತ್ತಿತ್ತು...

**ರಮೇಶ್ ಕುಮಾರ್ ನಾಯಕ್**

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದವರು. ಸದ್ಯ ಬೆಂಗಳೂರಿನಲ್ಲಿ ವಾಸ. ವೃತ್ತಿಯಲ್ಲಿ ಪತ್ರಕರ್ತ. ಹಲವು ಕಥಾಸ್ಪರ್ಧೆ, ಕವನ, ಕಿರು ನಾಟಕ ರಚನೆ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿದ್ದಾರೆ.